ಪ್ರತಿಕ್ರಿಯೆಗಳಿಗೂ ಒಂದು ಬಗೆಯ ತತ್‌ಕ್ಷಣತೆ, ಅವಸರದ ಗುಣ ಇರುತ್ತಿತ್ತು. ನನಗೆ ಒಳ್ಳೆಯವು ಎಂದು ಅನ್ನಿಸಿದ ಪುಸ್ತಕಗಳ ಬಗ್ಗೆ ಮೆಚ್ಚುಗೆ, ಅಷ್ಟೇನೂ ಒಳ್ಳೆಯವು ಅನ್ನಿಸದ ಕೃತಿಗಳ ಬಗ್ಗೆ ಟೀಕೆ, ಕೆಟ್ಟ ಪುಸ್ತಕಗಳು ಎಂದು ನಾನು ಭಾವಿಸಿದ ಪುಸ್ತಕಗಳ ಬಗ್ಗೆ ವ್ಯಂಗ್ಯಭರಿತ ಕಟುಮಾತುಗಳು ವ್ಯಕ್ತವಾಗುತ್ತಿದ್ದವು. ವಿಚಾರಸಂಕಿರಣಗಳಲ್ಲಿ ಪ್ರಬಂಧ ಮಂಡಿಸಲು ಆಹ್ವಾನ ಬಂದಾಗಲೂ ಹೀಗೆಯೇ ಆಗುತ್ತಿತ್ತು. ವಿಷಯಗಳ ಆಯ್ಕೆ ಯಾರದೋ ಆಗಿರುತ್ತಿತ್ತು. ಆ ಹಣೆಪಟ್ಟಿಯಡಿಯಲ್ಲಿ ಬರೆಯುವ ಒತ್ತಡ ಇರುತ್ತಿತ್ತು. ಬೋಧನೆಯ ಸಂದರ್ಭದಲ್ಲೂ ಒಂದು ಮಟ್ಟದಲ್ಲಿ ಇದೇ ರೀತಿಯ ಅನುಭವವಾಗುತ್ತಿತ್ತು. ವಿಶ್ವವಿದ್ಯಾಲಯ ನಿರ್ಧರಿಸಿದ ಪಠ್ಯಗಳನ್ನು ಮಾತ್ರ ಅನಿವಾರ್ಯವಾಗಿ ಪಾಠ ಮಾಡಬೇಕಾಗಿತ್ತು. ನನ್ನ ಓದು–ಬರಹಗಳಲ್ಲಿ ಪ್ರಾಮಾಣಿಕತೆ, ನಿಷ್ಠುರತೆ, ಪಾರದರ್ಶಕತೆಗಳು ಇದ್ದಾಗಲೂ ಒಂದು ಬಗೆಯ ವೃತ್ತಿಪರತೆ, ಕಸುಬುಗಾರಿಕೆ ಮೇಲ್ಮೆಯಲ್ಲಿದ್ದವು. ಆದರೆ ಇದರ ಮಿತಿಗಳು ನನಗೆ ನಿಧಾನವಾಗಿ ಅರ್ಥವಾಗಲಾರಂಭಿಸಿತು. ಅಧ್ಯಾಪಕನಾಗಿ ನಾನು ಬೋಧಿಸಬೇಕಾದ ಪಠ್ಯಗಳ ಆಯ್ಕೆಯಲ್ಲಿ ನನಗೆ ಹೆಚ್ಚಿನ ಸ್ವಾತಂತ್ರ್ಯ ಇರಲಿಲ್ಲ ನಿಜ. ಆದರೆ ನನಗೆ ಬೇಕಾದ ಪುಸ್ತಕಗಳನ್ನು ಓದುವ, ನನಗೆ ಇಷ್ಟವಾಗುವ, ನನ್ನ ಮನಸ್ಸನ್ನು ತಟ್ಟುವ, ಅದರಿಂದ ಪಡೆದ ಅನುಭವವನ್ನು ಇತರ ಸಹೃದಯರೊಂದಿಗೆ ಹಂಚಿಕೊಳ್ಳಬೇಕೆಂಬ ತುರ್ತಿನಲ್ಲಿ ಮಾತ್ರ ಬರೆಯುವ ಸ್ವಾತಂತ್ರ್ಯ ಇದ್ದೇ ಇದೆಯಲ್ಲ ಎನಿಸಿತು. ಅಂದಿನಿಂದ ಎಲ್ಲ ಪುಸ್ತಕಗಳ ಬಗ್ಗೆ ಪ್ರತಿಕ್ರಿಯಿಸುವ ವೃತ್ತಿಪರತೆಯನ್ನು ಬಿಟ್ಟುಕೊಟ್ಟು ನನ್ನ ಅಂತರಂಗಕ್ಕೆ ಇಳಿದ, ನನ್ನ ಲೋಕಾನುಭವವನ್ನು ಹಿಗ್ಗಿಸಿದ ಕೃತಿಗಳ ಬಗ್ಗೆ ಮಾತ್ರ ಬರೆಯಲಾರಂಭಿಸಿದೆ. 1984 ಆಗಸ್ಟ್‌ನಿಂದ 1991 ಡಿಸೆಂಬರ್‌ವರೆಗೆ ಸತತವಾಗಿ ಪ್ರತಿ ತಿಂಗಳೂ ಒಂದೊಂದು ಪುಸ್ತಕದ ಬಗ್ಗೆ ಪೂರ್ಣ ಪ್ರಮಾಣದ ಲೇಖನಗಳನ್ನು 'ಮಯೂರ'ದಲ್ಲಿ ಬರೆದೆ. ಹಳೆಯ, ಹೊಸ ಕೃತಿಗಳ ಬಗ್ಗೆ ಬರೆದೆ. ಸಮಕಾಲೀನ ಕೃತಿಗಳ ಬಗ್ಗೆ ಮಾತ್ರ ಬರೆಯಬೇಕು, ಸಾಹಿತ್ಯ ಕೃತಿಗಳ ಬಗ್ಗೆ ಮಾತ್ರ ಬರೆಯಬೇಕು ಎಂಬ ಅಲಿಖಿತ ನಿಯಮಗಳನ್ನು ಬದಿಗೊತ್ತಿ ಎಲ್ಲ ಬಗೆಯ ಪುಸ್ತಕಗಳ ಬಗ್ಗೆ ಬರೆದೆ. ವಿಚಾರಸಂಕಿರಣಗಳನ್ನೂ ಆಯ್ಕೆ ಮಾಡಿಕೊಳ್ಳಲಾರಂಭಿಸಿದೆ. ಪುಸ್ತಕ ಬರೆಯುವ ಅಸೈನ್‌ಮೆಂಟ್‌ಗಳನ್ನು ಬಿಟ್ಟುಕೊಟ್ಟು ನನಗೆ ಬರೆಯಬೇಕೆನ್ನಿಸಿದ ಪುಸ್ತಕಗಳನ್ನು ಮಾತ್ರ ಬರೆದೆ. 1978ರಲ್ಲಿ ವಿಮರ್ಶೆಯನ್ನು ಬರೆಯಲಾರಂಭಿಸಿದ ನಾನು ಎಂಬತ್ತರ ದಶಕದ ಮಧ್ಯ ಭಾಗದ ಹೊತ್ತಿಗೆ ಈ ಬಗೆಯ ಬರವಣಿಗೆಯ ಬಗ್ಗೆ ಹೆಚ್ಚಿನ ಸ್ಪಷ್ಟತೆಯನ್ನು ಹೊಂದಲಾರಂಭಿಸಿದೆ.

3 ವಿಮರ್ಶೆ ಎಂದರೆ ನಾನು ಓರ್ವ ಲೇಖಕನನ್ನು ಅಥವಾ ಕೃತಿ ಅಥವಾ ಕೃತಿಸರಣಿಯನ್ನು ಓದಿದ ಬಗೆಯನ್ನು, ಅರ್ಥಮಾಡಿಕೊಂಡ ಬಗೆಯನ್ನು, ಅನುಭವಿಸಿದ್ದನ್ನು ಇತರ ಓದುಗರೊಂದಿಗೆ ಹಂಚಿಕೊಳ್ಳುವ ಒಂದು ತುರ್ತು, ಶಿಸ್ತು, ಕ್ರಮ ಮತ್ತು ಬರವಣಿಗೆಯ ವಿಧಾನ. ಅಂದರೆ ನನ್ನ ಓದಿಗೆ ನಾನೇ ಜವಾಬ್ದಾರ. ನನ್ನ ಅನುಭವದ ಸತ್ಯಕ್ಕೆ ನಾನೇ ಜವಾಬ್ದಾರ. ಇತರರಿಗೆ ಪ್ರಚಾರ ಕೊಡಲು, ಇತರರನ್ನು ಮೆಚ್ಚಿಸಲು ಅಥವಾ ಟೀಕಿಸಲು, ಪ್ರೋತ್ಸಾಹಿಸಲು ಅಥವಾ ಹೀಗಳೆಯಲು ಬರೆದರೆ ಅದು ವಿಮರ್ಶೆಯಾಗುವುದಿಲ್ಲ. ವಿಮರ್ಶೆಯ ಲೇಖನಗಳಿಂದ ಅಥವಾ ಪುಸ್ತಕಗಳಿಂದ ಪರ್ಯಾಯವಾಗಿ ಅಥವಾ ಅನುದ್ದಿಶ್ಯವಾಗಿ ಇವೆಲ್ಲವೂ ಆಗಬಹುದು. ಆದರೆ ಅದು ವಿಮರ್ಶೆಯ ಪ್ರಾಥಮಿಕ ಉದ್ದೇಶವಾಗಿರುವುದಿಲ್ಲ, ಆಗಬಾರದು ಕೂಡ. ಅಧಿಕ ಪ್ರಸಾರವುಳ್ಳ ಪತ್ರಿಕೆಗಳಲ್ಲಿ ತಮ್ಮ ಬಗ್ಗೆ ಯಾರಾದರೂ ಬರೆದರೆ ಆಗುವಷ್ಟು ಸಂತೋಷ ಕಿರುಪತ್ರಿಕೆಗಳಲ್ಲಿ ಬರೆದರೆ ಆಗುವುದಿಲ್ಲ. ವಿಮರ್ಶೆ ಎಂದರೆ ಪ್ರಚಾರ ಎಂದು ಭಾವಿಸಿದಾಗ